

ಮುಟ್ಟಿನ ಸುತ್ತ ಗುಮಾನಿಗಳು, ಭಯಗಳು, ತಾತ್ಸಾರ, ಪೂಜೆ ಇತ್ಯಾದಿ ನಡೆಯುತ್ತ ಬಂದಿವೆ.

ಇವುಗಳ ಜೊತೆಗೆ ಮುಟ್ಟಿನ ಸಂಭಾಳಿಕೆಗೆ ಬಳಸುವ ವಸ್ತುಗಳನ್ನು 'ಐಷಾರಾಮಿ' ಎಂದು ಕರೆಯುವ ದೇಶಗಳೂ ಇವೆ. ಈ ಧೋರಣೆಯಿಂದಲೇ ಮುಟ್ಟಿನ ಸಂದರ್ಭದಲ್ಲಿ ಬಳಸುವ ವಸ್ತುಗಳಿಗೆ ಹೆಚ್ಚಿನ ತೆರಿಗೆಯನ್ನು ವಿಧಿಸುವುದು ಕಂಡುಬಂದಿದೆ. 'ಪೀರಿಯಡ್ಸ್ ಟ್ಯಾಕ್ಸ್' ಎಂದೇ ಕುಪ್ರಸಿದ್ಧವಾದ ಈ ವಿಚಾರಗಳು ಇತ್ತೀಚೆಗಿನ ಮಹಿಳಾ ಜಾಗೃತಿಯ ಸಮಯದಲ್ಲಿ ಬೆಳಕಿಗೆ ಬಂದಿದೆ. 2021ರ ಪ್ರಕಾರ, ಜಗತ್ತಿನ 50 ಕೋಟಿ ಮಹಿಳೆಯರಿಗೆ ಮುಟ್ಟಿನ ದಿನಗಳಲ್ಲಿ ಸರಿಯಾದ ವಸ್ತುಗಳನ್ನು ಬಳಸಲಾಗದಷ್ಟು ಬಡತನವಿದೆ. ಅಮೆರಿಕದಲ್ಲಿ 2021ರಲ್ಲಿ ನಡೆದ ಅಧ್ಯಯನದ ಪ್ರಕಾರ, ಅಲ್ಲಿನ 'ಪೀರಿಯಡ್ ಪಾವರ್ಟಿ'ಯಲ್ಲಿರುವ ಶೇ. 68 ಮಹಿಳೆಯರಲ್ಲಿ ಖಿನ್ನತೆಯ ಸುಮಾರಾದ ಅಥವಾ ತೀವ್ರ ಲಕ್ಷಣಗಳಿವೆ. ಇವರಲ್ಲಿ ಬಹುತೇಕರು ವಲಸೆ ಬಂದವರು. ಇದೇ ಅಧ್ಯಯನವನ್ನು ಈಗ ತೃತೀಯ ಲಿಂಗಿಗಳಿಗೂ ವಿಸ್ತರಿಸಲಾಗಿದೆ.

ಹಿಂದೆ ಗಂಡಾಗಿದ್ದು ಹೆಂಗಸಾಗಿ ಲಿಂಗ ಬದಲಾವಣೆ ಮಾಡಿಕೊಂಡವರಲ್ಲಿ ಕೂಡ ಮುಟ್ಟಾಗಬೇಕಿದ್ದ ದಿನಗಳಲ್ಲಿ ದೈಹಿಕ ಮತ್ತು ಮಾನಸಿಕ ಬದಲಾವಣೆಗಳು ಕಾಣಿಸಿಕೊಳ್ಳುವುದು ಕಂಡುಬಂದಿದೆ. ಅದೇ ರೀತಿ, ಹೆಣ್ಣು ಗಂಡಾಗಿ ತಮ್ಮನ್ನು ಗುರುತಿಸಿಕೊಂಡಿದ್ದರೂ ಅವರಲ್ಲಿ ಪೀರಿಯಡ್ಸ್ ಆಗುತ್ತಿರುತ್ತದೆ. ಆದರೆ, ಅವರು ಲೋಕದ ಕಣ್ಣಲ್ಲಿ ಗಂಡಾಗಿರುವ ಕಾರಣ ಅವರಿಗೆ ಮುಟ್ಟಿನ ರಜೆಯನ್ನು ಹೇಗೆ ಅನ್ವಯ ಮಾಡಬೇಕೆನ್ನುವ ವಿಚಾರಗಳನ್ನು ಕೂಡ ಪರಿಗಣಿಸಬೇಕಾಗುತ್ತದೆ. ಅವರಿಗೆ ಪುರುಷರಿಗೆ ಮಾತ್ರ ಸಿಗಬಹುದಾದ ಸವಲತ್ತುಗಳೂ ಕೂಡ ಸಿಗುವುದನ್ನೂ ಗಮನಿಸಬೇಕು. ಅಂತಹ ವ್ಯಕ್ತಿಯ ಲಿಂಗದ ಗುರುತನ್ನು ಗೌರವಿಸುವ ಸಲುವಾಗಿ ಪೀರಿಯಡ್ಸ್ ಸೈಕಲ್‌ಗೆ ಬದಲಾಗಿ 'ಸೈಕಲ್' ಎಂದೂ, ಫೆಮಿನೈನ್ ಹೈಜೀನ್ ಸಾಮಗ್ರಿಗಳು ಎನ್ನುವ ಬದಲು 'ಮುಟ್ಟಿನ ಸಾಮಗ್ರಿಗಳು' ಎಂದು ಹೇಳಬಹುದು ಎಂಬ ಸಲಹೆಗಳಿವೆ.

ಮುಟ್ಟಿನ ರಜೆಯ ವಿಚಾರ ಬಂದಾಗಲೂ ಇಂತಹುವೇ ಕೆಲವು ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಒಂದು ನೀತಿಸಂಹಿತೆಯನ್ನು ರೂಪಿಸಲು ಸಾಧ್ಯತೆಯಿದೆ.

## ಮುಟ್ಟಿನ ರಜೆಯ ಸಂಧಾನ ಮುಂದೊಂದು ದಿನ ಅನಿವಾರ್ಯವೇ?

ಮುಟ್ಟು ಎನ್ನುವುದು ಅನಿಷ್ಟವಲ್ಲ, ಅದೊಂದು ಮಾನವೀಯ ಅಗತ್ಯ. ಅದಿಲ್ಲದಿದ್ದರೆ ಮಾನವ ಸೃಷ್ಟಿಯ ಕ್ರಿಯೆಯಲ್ಲಿ ವ್ಯತ್ಯಾಸ ಉಂಟಾಗುತ್ತದೆ ಎಂಬ ಅರಿವನ್ನು ಸಮಾಜದಲ್ಲಿ ಬೇರೂರಿಸಬಹುದಾದ ಅಗತ್ಯ ಇನ್ನೂ ಇರುವುದು ವಿಪರ್ಯಾಸ. ಸಮಾಜ ಮತ್ತು ಸಾಮಾನ್ಯ ವಿಜ್ಞಾನ ಬೆಳೆಯುತ್ತಿದೆ ಎನ್ನುವ ಕಾಲದಲ್ಲೂ ಸಹಜ ದೈಹಿಕ ಕ್ರಿಯೆಗೆ ಸವಲತ್ತುಗಳೇ ಇಲ್ಲದಿರುವಷ್ಟು ಬಡತನ, ಅದರ ಬಗ್ಗೆ ಮಾತಾಡಲು ಹಿಂಜರಿಕೆ, ಮುಟ್ಟಿನ ಬಗ್ಗೆ ಹೆಂಗಸರಲ್ಲಿ ಕೀಳರಿಮೆ ಇರುವುದು ದುಃಖಕರ. ಹೆಂಗಸಿನ ಅಸ್ತಿತ್ವವೇ ಮುಟ್ಟಿನಲ್ಲಿದ್ದರೂ ಸಮಾಜ ಅದನ್ನು ಅಪದ್ಧವೆಂಬಂತೆ ನೋಡುವುದು ಶುದ್ಧ ಮೌಢ್ಯತೆ. ಈ ಬಗ್ಗೆ ಇದೀಗ ಜಾಗೃತಿ ಮೂಡಿ, ಸುಪ್ರೀಂ ಕೋರ್ಟ್ ಮುಟ್ಟಿರುವುದರಿಂದ, ಇನ್ನು ಮುಂದೆ ಕೈ ಕಟ್ಟಿ ಕೂರುವುದಿಲ್ಲ ಎಂಬ ಆಶಾಭಾವ ಈ ವಿಷಯದ ಪರವಾಗಿ ವಾದಿಸುವವರಲ್ಲಿದೆ.

ಯುವಜನರೇ ಹೆಚ್ಚು ತುಂಬಿರುವ ಇಂದಿನ ಭಾರತದಲ್ಲಿ ಅಸಂಖ್ಯಾತ ಉದ್ಯೋಗಸ್ಥ ಮಹಿಳೆಯರಿದ್ದಾರೆ. ಇವರು ಪಟ್ಟು ಹಿಡಿದು ಕೂತರೆ ಮುಟ್ಟಿನ ರಜೆಯ ಹಕ್ಕನ್ನು ಹೆಣ್ಣು ಹೆಮ್ಮೆಯಿಂದ ಪಡೆಯಬಹುದು. ಇಡೀ ಮಹಿಳಾ ಸಮುದಾಯ ಹರತಾಳ ನಡೆಸಿದರೆ, ಕೆಲಸಗಾರರ ಕೊರತೆ, ಉತ್ಪನ್ನಗಳ ಅಭಾವದಿಂದ ದೇಶ ತತ್ತರಿಸುವಷ್ಟು ಮಹಿಳೆ ಇಂದು ಮುಂದೆ ಬಂದಿದ್ದಾಳೆ. ಇದೇ ಕಾರಣಕ್ಕೆ ಆಕೆ ಹೋರಾಟವನ್ನು ಮತ್ತೊಂದು ರೀತಿಯಲ್ಲಿ ಮುಂದುವರೆಸುತ್ತಾಳೆ ಎಂದು ಮಹಿಳಾ ಜಾಗೃತಿಯ ಕಾರ್ಯಕರ್ತರು ನಂಬುತ್ತಾರೆ. ಹಿಂದೊಮ್ಮೆ 'ತಾಯ್ತನದ ರಜೆ' ಕೇಳಿದಾಗಲೂ ಅದಕ್ಕೆ ತೀವ್ರ ವಿರೋಧ ವ್ಯಕ್ತವಾಗಿದ್ದನ್ನು ಈ ಕಾರ್ಯಕರ್ತರು ನೆನಪಿಸುತ್ತಾರೆ.

ಮುಟ್ಟಿನ ದಿನಗಳಲ್ಲಿ ಮನೆಯಿಂದ ಕೆಲಸ ಮಾಡಲು ಅನುಕೂಲ ಇರುವವರಿಗೆ ಆ ಅವಕಾಶ ದೊರೆಯಬೇಕು. ಮುಟ್ಟಾದ ಮಹಿಳೆಗೆ ಅಗತ್ಯಕ್ಕೆ ತಕ್ಕಂತೆ ಕೆಲಸದ ನಡುವೆ ಒಂದಿಷ್ಟು ವಿಶ್ರಾಂತಿ ಬೇಕು. ಆಕೆ ವೇತನ ಕಳೆದುಕೊಂಡು ರಜೆ ತೆಗೆದುಕೊಂಡರೆ ಕೆಲಸದಿಂದ ತೆಗೆಯಬಾರದು – ಇವಿಷ್ಟು ಸುರಕ್ಷತೆ ಮತ್ತು ಹೆಣ್ಣು ಮುಟ್ಟಾಗುತ್ತಾಳೆ ಎಂಬ ಕಾರಣಕ್ಕೆ ಉದ್ಯೋಗ ಕಳೆದುಕೊಳ್ಳುವುದಿಲ್ಲ ಎಂಬ ಭರವಸೆ ಕಾನೂನಾತ್ಮಕವಾಗಿ ಸಿಕ್ಕರೆ ಈ ಬಗೆಗಿನ ದಾಢಸಿ ಆಲಸ್ಯ ನೀಗಬಹುದು. ಮಹಿಳೆಯರು ಕೆಲಸ ಮಾಡುವ ಸ್ಥಳಗಳಲ್ಲಿ ಅವರ ಮುಟ್ಟಿನ ಸಾಮಗ್ರಿಗಳನ್ನು ಮತ್ತು ಸ್ವಚ್ಛತೆಗೆ ಅನುಕೂಲಗಳನ್ನು ಕಲ್ಪಿಸುವುದು, ಇತ್ಯಾದಿಗಳು ಹಂತ ಹಂತವಾಗಿ ಶುರುವಾದರೂ, ಅದು ಮಹಿಳೆಯರ ಸಂತಾನೋತ್ಪತ್ತಿಯ ಆರೋಗ್ಯಕ್ಕೆ ಸಿಗುವ ಆರೈಕೆ ಮತ್ತು ಮಾನ್ಯತೆ ಎನ್ನುವುದರಲ್ಲಿ ಸಂದೇಹವಿಲ್ಲ.

ಪ್ರತಿಕ್ರಿಯಿಸಿ: feedback@sudha.co.in